ಹತ್ತಿರವಾಗಿದ್ದ ಮನೆಗಳಿಗೆ ಹೋದೆವು. ಗೆದ್ದ ಮನೆಯೊಡೆಯರು ಮನೆಕಟ್ಟಿದ್ದನ್ನು ಎವರೆಸ್ಟ್ ಮುಟ್ಟಿಬಂದ ಸಾಹಸಗಾಥೆಯಂತೆ ಬಣ್ಣಿಸುತ್ತಿದ್ದರು. ಮೊಗದಲ್ಲಿ ಸಾಧನೆಯ ಹಮ್ಮು ಹೊಮ್ಮುತ್ತಿತ್ತು. 'ಕಟ್ಟಿಸಾ. ಅದೊಂದು ಗ್ರೇಟ್ ಎಕ್ಸ್‌ಪಿರಿಯನ್ಸು. ಹೆಚ್ಚುಕಮ್ಮಿಯಾದರೆ ನಾವಿದ್ದೇವೆ' ಎಂದು ಅಭಯ ಕೊಡುತ್ತಿದ್ದರು. ಸೋತ ಮನೆಯೊಡೆಯರು ನರಕಕ್ಕೆ ಹೋಗಿ ಬಂದವರಂತೆ ಉಧ್ವಸ್ಥರಾಗಿದ್ದರು. ರೋಗಿಗಳು ಬೇನೆಯನ್ನು ಸವಿವರವಾಗಿ ಹೇಳಿಕೊಳ್ಳುವಂತೆ, ಕೆಲಸಗಾರರು ಮಾಡಿದ ದಗಾ ಮತ್ತು ಕೊಟ್ಟ ಕೋಟಲೆಯಿಂದಾದ ವೇದನೆಯನ್ನು ತೋಡಿಕೊಳ್ಳುತ್ತಿದ್ದರು. ವಿಪರೀತ ವಾಸ್ತುಭಯವಿದ್ದ ಹೆಂಡತಿ ದೆಸೆಯಿಂದ ಒಬ್ಬ ವೈದ್ಯರು, ಐದಾರು ಸಲ ಗೋಡೆಕೆಡವಿ, ಬಾಗಿಲ ದಿಕ್ಕು ಬದಲಿಸಿ, ಬಳಲಿಹೋಗಿದ್ದರು. ಹಳೆಗಾಯದ ಕಲೆಯನ್ನು ಸವರುತ್ತ ಕಟ್ಟಿದ ಮನೆಸುಖವನ್ನು ಅನುಭವಿಸದೆ ಕುದಿಯುತ್ತಿದ್ದರು. 'ಏನಾದರೂ ಮಾಡಿ. ಇದೊಂದು ತಪ್ಪಿಗೆ ಕೈಹಾಕಬೇಡಿ' ಎಂದು ಹಿತಚಿಂತಕರಾಗಿ ಸಲಹೆ ಕೊಡುತ್ತಿದ್ದರು. ಮನೆಯೇ ಬಂದೀಖಾನೆಯಾದ ಅವರ ಅವಸ್ಥೆ ಕಂಡು ನಡುಗಿಹೋದೆವು. ಅವರು ಕೊಡುತ್ತಿದ್ದ ಚಹ, ಹೆಚ್ಚು ಕುದಿಸಿದ ಕಾರಣದಿಂದಲೊ ಏನೊ ಕಟ್ಟಂ ಕಹಿಯಾಗಿರುತ್ತಿತ್ತು.

ಆದರೂ ನಾವು ನೀರಿಗಿಳಿಯಲು ನಿರ್ಧರಿಸಿದೆವು. ಎಲ್ಲರಿಂದಲೂ ಅನುಭವದ ಒಂದೊಂದು ಎಳೆಯನ್ನು ತೆಗೆದುಕೊಂಡು ನಮ್ಮದೇ ಗೂಡಿನ ಕಲ್ಪನೆ ಕಟ್ಟಿಕೊಂಡೆವು. ಆತಂಕ ಆಸೆಗಳಿಂದ ಕೂಡಿ ಕಂಪಿಸುತ್ತಿದ್ದ ಕೈಗಳಿಂದ ನೆಲಕ್ಕೆ ಗುದ್ದಲಿ ಹಾಕಿದೆವು. ಅದೃಷ್ಟಕ್ಕೆ ಸ್ಥಳೀಯ ಸಾಮಗ್ರಿಗಳನ್ನೇ ಬಳಸಿ ವಿಶಿಷ್ಟವಾಗಿ ಮನೆಕಟ್ಟುವ ವಾಸ್ತುಶಿಲ್ಪಿಯೊಬ್ಬರು ಸಿಕ್ಕರು. ಯಾವಾಗಲೂ ಆಯಾ ಪ್ರದೇಶದ ಕಚ್ಚಾವಸ್ತುಗಳಿಂದಲೇ ಮನೆ ಕಟ್ಟುವುದು ಉಚಿತ. ಕೊನೆಯ ಪಕ್ಷ ಖರ್ಚು ಉಳಿಯುತ್ತದೆ. ನನ್ನ ಬಂಧುಗಳೊಬ್ಬರು ನೆಲಕ್ಕೆ ಹಸಿರು ಇಟಾಲಿಯನ್ ಮಾರ್ಬಲ್ ಹಾಕಿಸಿದ್ದರು. ಗೃಹಪ್ರವೇಶದ ದಿನವೇ ಸಂಭ್ರಮದಿಂದ ಓಡಾಡುತ್ತಿದ್ದ ಅವರ ಸಹಧರ್ಮಿಣಿ ಚೆಲ್ಲಿದ ನೀರನ್ನು ಕಾಣದೆ, ರಾಜಸೂಯ ಯಾಗಕ್ಕೆ ಬಂದ ದುರ್ಯೋಧನನು ಅರಮನೆಯ ಕೊಳವನ್ನು ನೆಲವೆಂದು ತಿಳಿದು ಜಾರಿದಂತೆ ಧಡಾರನೆ ಬಿದ್ದು, ಸೊಂಟ ಮುರಿದುಕೊಂಡಿದ್ದರು. ಸೊಂಟ ಮುರಿಯಲು ಕಲ್ಲು ಇಟಲಿಯಿಂದ ಬರಬೇಕೇ? ನಮ್ಮ ಕಲ್ಲೇ ಸಾಲದೇ? ಮನೆಗಳು ಕಟ್ಟಿದವರ ಅಭಿರುಚಿ ಸೌಂದರ್ಯಪ್ರಜ್ಞೆ ಆಲೋಚನಕ್ರಮ ವ್ಯಕ್ತಿವಿಶಿಷ್ಟತೆಗಳಿಗೆ ಕನ್ನಡಿ ಹಿಡಿಯುತ್ತವೆ. ಜತೆಗೆ ಸ್ವಪ್ರತಿಷ್ಠೆಯನ್ನೂ ಸಾರುತ್ತವೆ. ಗೆಳೆಯರೊಬ್ಬರಿಗೆ ಕಂಡಕಂಡವರನ್ನೆಲ್ಲ ಮನೆಗೆ ಕರೆಯುವ ಚಟವಿತ್ತು. ಆತಿಥ್ಯಪ್ರಜ್ಞೆಯಿಂದಲ್ಲ, ತಮ್ಮ ಮನೆಯನ್ನು ನೋಡಿದ ಅತಿಥಿಗಳು ಮಾಡುವ ಪ್ರಶಂಸೆಯನ್ನು ಕಿವಿಯಾರೆ ಕೇಳುವ ವ್ಯಸನದಿಂದ. ಹಕ್ಕಿಗೂಡುಗಳ ವಿಶಿಷ್ಟತೆ ಅವುಗಳ ಆಹಾರ ಮತ್ತು ಜೀವನಕ್ರಮಗಳಿಂದ ಬಂದಿದ್ದು. ಅವನ್ನು ನೋಡಿ ಹಕ್ಕಿಪ್ರಭೇದ ಹೇಳಬಹುದು ವಿನಾ ಅಂತಸ್ತನ್ನಲ್ಲ. ಆದರೆ ಮನುಷ್ಯ ಸಮಾಜದಲ್ಲಿ ಮನೆ, ಕಾರು, ಬಟ್ಟೆ, ಒಡವೆ ಎಲ್ಲವೂ ನಮ್ಮ ತುತ್ತೂರಿ ಊದುವ ಹೊಣೆ ನಿಭಾಯಿಸಬೇಕು. ಸಮಸ್ಯೆಯೆಂದರೆ, ಮನೆ ವಿಶಿಷ್ಟವಾಗಿರಬೇಕು ಎಂದು ಹಂಬಲಿಸುವ ಬಹಳ ಮಂದಿ, ಚೆಲುವಿಗೂ ವೆಚ್ಚಕ್ಕೂ ಸಂಬಂಧವಿಲ್ಲ ಎಂದರಿಯರು. ಸರಳತೆ ಮತ್ತು ಸ್ಪೇಸಿನಿಂದ ಹಿತಕೊಡುವ ಮನೆಗಳು ಎಷ್ಟಿಲ್ಲ? ಮಲೆನಾಡು ಕರಾವಳಿಗಳಲ್ಲಿ ಎಷ್ಟೇ ಸ್ಥಿತಿವಂತರಿರಲಿ ಹೆಂಚಿನ ಛಾವಣಿಯೇ. ಮಣ್ಣಿನಗೋಡೆ, ತೊಪ್ಪೆಹಾಕಿ ತಾರಿಸಿದ ನೆಲ, ಹುಲ್ಲಿನ ಛಾವಣಿ ಇರುವ ಬುಡಕಟ್ಟು ಮನೆಗಳಂತೂ ದೇಶೀ ಕಲಾಕೃತಿಗಳೇ ಸರಿ. ಅಂಕೋಲೆಯ ಹಾಲಕ್ಕಿಗಳ ಅಥವಾ ಬಂಗಾಳದ ಸಂತಾಲರ ಮನೆಗಳನ್ನು ನೋಡುವಾಗ, ಚಾಪೆಯಿಲ್ಲದೆ ಅಂಗಳದಲ್ಲಿ ಕೂತು ಊಟ ಮಾಡಬೇಕೆಂದು ತುಡಿಯುತ್ತದೆ.